# ಎಷ್ಟು ಕಷ್ಟ

ಬೇಕೆಂದು ಬೇಡಿದ್ದನ್ನು ನೆನಪಿನಲ್ಲಿ
ಇಡಬೇಡ
ಬೇಡವೆಂದು ಹೇಳಿದ್ದನ್ನು ಸತ್ಯವೆಂದು
ನಂಬಬೇಡ
ದಯಮಾಡಿ ಇದೊಂದು ಒಗಟೆಂದು
ದೂರಬೇಡ

ಕೊನೆಗೂ ಒಂದು ಮಾತು ನನ್ನ ಕೇಳದೇ
ವಿಧಿ ಅದಕ್ಕೆ ಬೇಕಾದ ಹಾಗೆ ಬರೆದಾಗಿದೆ

ಯಾರಲ್ಲೂ ಹೇಳಿ ಸುಖವಿಲ್ಲ
ನಿನಗೆ ಮಾತ್ರ ಹೇಳದಿದ್ದರೂ
ಅರ್ಥವಾಗಬಹುದಲ್ಲ

ಹೀಗೆಯೇ ಬದುಕುವುದು ಎಷ್ಟು ಕಷ್ಟ.

